**ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 31.08.2016 ರಂದು ಸಂಜೆ 5:00 ಗಂಟೆಗೆ ಗ್ರಾಅಪ ಇಲಾಖೆಯ ಸಭಾ ಕೊಠಡಿಯಲ್ಲಿ "ಪಂಚಾಯತ್-100 ಬಾಪೂಜಿ ಸೇವಾ ಕೇಂದ್ರ" ಮತ್ತು e-office ತಂತ್ರಾಂಶ ಅನುಷ್ಠಾನ ಮತ್ತು ಇತರೆ ವಿಷಯಗಳ ಕುರಿತು ಜರುಗಿದ ಸಭೆಯ ನಡವಳಿಗಳು.**

**<u>ಸಭೆಗೆ ಹಾಜರಾದ ಅಧಿಕಾರಿ/ಸಿಬ್ಬಂದಿಗಳು: (ಶ್ರೀ/ಶ್ರೀಮತಿ)</u>**

1. ಡಾ॥ ಎನ್. ನಾಗಾಂಬಿಕಾ ದೇವಿ, ಭಾ.ಆ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ.
2. ಮಹದೇವ, ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
3. ಕೆಂಪೇಗೌಡ ಎಂ.ಕೆ, ನಿರ್ದೇಶಕರು (ಪಂ.ರಾಜ್-1), ಗ್ರಾಅಪ ಇಲಾಖೆ, ಬೆಂಗಳೂರು.
4. ಆಯುಕ್ತರು, ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳು, ಕೆ.ಆರ್.ವೃತ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ(ಇ-ಆಡಳಿತ) (ಪರವಾಗಿ), ಸಿಆಸು ಇಲಾಖೆ, ಬೆಂಗಳೂರು.
6. ಡಾ॥ ಹರೀಶ್ ಕುಮಾರ್ ಕೆ. Special Deputy Commissioner, Bhoomi Monitoring Cell.
7. ಮೀನಾ ನಾಗರಾಜ್, Additional Director, AJSK, Revenue Dept.
8. ಬಾಲಚಂದ್ರ, PSA, NIC, Bengaluru.
9. ದೀಪಕ್ ದೇವ್, Sr. Consultant, SeMT, CeG(e-Gov)
10. ಸುರೇಶ್ ನಾಯರ್, Project Manager, Bhoomi
11. ಮಂಜುನಾಥ್, Project Leader, AJSK, Revenue Dept.
12. ಪವನಕುಮಾರ್, Project Manager, AJSK, Revenue Dept.
13. ಮಹಮ್ಮದ್ ಇಮ್ತಿಯಾಜ್, ರಾಜ್ಯ ಯೋಜನಾ ವ್ಯವಸ್ಥಾಪಕರು, ಇ-ಪಂಚಾಯತ್, ಗ್ರಾಅಪ ಇಲಾಖೆ.
14. ಅಮೃತವರ್ಷಿಣಿ, ಪ್ರೋಗ್ರಾಮರ್, ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.

ನಿರ್ದೇಶಕರು, ಇ-ಆಡಳಿತ ಇವರು ಸಭೆಗೆ ಹಾಜರಾಗಿದ್ದ ಮಾನ್ಯ ಸಚಿವರನ್ನು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿದರು.

ನಂತರ ಸಭೆಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸಭೆಯ ಕಾರ್ಯಸೂಚಿ ಅಂಶಗಳ ಬಗ್ಗೆ ಸುದೀರ್ಘವಾಗಿ ಚರ್ಚೆಯನ್ನು ನಡೆಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

**1. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಸ್ಥಾಪಿಸಲು ಉದ್ದೇಶಿಸಿರುವ "ಪಂಚಾಯತ್ – 100 ಬಾಪೂಜಿ ಸೇವಾ ಕೇಂದ್ರ" ಗಳ ಮೂಲಕ ಒದಗಿಸಲಾಗುವ ಆನ್‌ಲೈನ್ ಸೇವೆಗಳ ಬಗ್ಗೆ.**

ಆನ್‌ಲೈನ್ ಸೇವೆಗಳಿಗೆ ಸಂಬಂಧಿಸಿದಂತೆ, 17 ಬಿ2ಸಿ ಸೇವೆಗಳು ಪ್ರಸ್ತುತ ಲಭ್ಯವಿಲ್ಲದ ಕಾರಣ, ಈ ಸೇವೆಗಳನ್ನು ಗ್ರಾಮ ಪಂಚಾಯತ್ ಮಟ್ಟದಲ್ಲಿ ಇಂಟಿಗ್ರೇಟ್ ಮಾಡುವ ಸಲುವಾಗಿ ಸಿಆಸುಇ ಇ-ಆಡಳಿತ ಇವರ ಸಹಯೋಗದೊಂದಿಗೆ Apna – CSC ಮತ್ತು Karnataka One ಇವರೊಂದಿಗೆ ಕೂಡಲೇ ಚರ್ಚಿಸಿ ಇಲಾಖೆಗೆ ಸೂಕ್ತವಾದವರೊಂದಿಗೆ ಇಂಟಿಗ್ರೇಟ್ ಮಾಡಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

17 ಬಿ2ಸಿ ಸೇವೆಗಳ ಭದ್ರತೆಗೆ ಸಂಬಂಧಿಸಿದ ಅಂಶಗಳನ್ನು ಪರಿಗಣಿಸುವುದು ಅತಿ ಮುಖ್ಯ ಎಂದು ಎನ್.ಐ.ಸಿ ಅಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿದರು ಹಾಗೂ ಈ ಸೇವೆಗಳನ್ನು ಒದಗಿಸಲು ಸಂಬಂಧಿಸಿದ ಇಲಾಖೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು ಸೂಕ್ತವೆಂದು ಸಭೆಯ ಗಮನಕ್ಕೆ ತರಲಾಯಿತು.

ಆನ್‌ಲೈನ್ ಸೇವೆಗಳ ಮುಖಾಂತರ ಸಂಗ್ರಹಣೆಯಾಗುತ್ತಿರುವ ಸೇವಾ ಶುಲ್ಕವನ್ನು ಜಮೆ ಮಾಡಲು ಪ್ರತ್ಯೇಕ ಖಾತೆಗಳನ್ನು ತೆರೆಯಲು ಕಡತವನ್ನು ಅನುಮೋದನೆಗಾಗಿ ಆರ್ಥಿಕ ಇಲಾಖೆಗೆ ಸಲ್ಲಿಸಿರುವುದರಿಂದ Payment Gateway ನ್ನು ಇಂಟಿಗ್ರೇಟ್ ಮಾಡಲು ಪ್ರತ್ಯೇಕ ಖಾತೆ ಸಂಖ್ಯೆಯ ಅವಶ್ಯಕತೆಯಿದೆಯೆಂದು ಹಾಗೂ ಸದರಿ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದೆ ಎಂದು ಸಭೆಯ ಗಮನಕ್ಕೆ ತರಲಾಯಿತು. ಈ ಸಂಬಂಧ ಈಗಾಗಲೇ Paygov, GoI ತಂಡದೊಂದಿಗೆ ಚರ್ಚಿಸಲಾಗಿದೆ.

"ಪಂಚಾಯತ್ – 100 ಬಾಪೂಜಿ ಸೇವಾ ಕೇಂದ್ರ" ಗಳ ಯಶಸ್ವೀ ಅನುಷ್ಠಾನಕ್ಕೆ ಗ್ರಾಮ ಪಂಚಾಯತಿ ಹಂತದಲ್ಲಿ ಹಲವಾರು ತೊಡಕುಗಳಿದ್ದು, ಸದರಿ ಅಂಶಗಳನ್ನು ಪರಿಶೀಲಿಸಿ ಸರ್ಕಾರದ ಮಟ್ಟದಲ್ಲಿ ಕ್ರಮಕೈಗೊಳ್ಳಬೇಕಾಗಿದ್ದು, ಈ ವಿಷಯವಾಗಿ ಚರ್ಚಿಸಿ ಒಟ್ಟು 6022 ಗ್ರಾಮ ಪಂಚಾಯತ್‌ಗಳ ಪೈಕಿ ಈಗ 3324 ಗ್ರಾಮ ಪಂಚಾಯತ್‌ಗಳಲ್ಲಿ ಮಾತ್ರ ಆಪ್ಟಿಕಲ್ ಫೈಬರ್ ಕೇಬಲ್‌ಗಳ ಮೂಲಕ ಇಂಟರ್‌ನೆಟ್ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಉಳಿದ ಗ್ರಾಮ ಪಂಚಾಯತ್‌ಗಳಲ್ಲಿ ಅನ್ಯ ಮಾರ್ಗಗಳನ್ನು ಅನುಸರಿಸಿ ಇಂಟರ್‌ನೆಟ್ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ. ಈ ವಿಷಯವಾಗಿ ಬಿ.ಎಸ್.ಎನ್.ಎಲ್. ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದ್ದು, ಉಳಿದ ಹಳೆಯ ಗ್ರಾಮ ಪಂಚಾಯತ್‌ಗಳಿಗೆ ಡಿಸೆಂಬರ್ 2016ರ ಅಂತ್ಯದಲ್ಲಿ ಹಾಗೂ ಹೊಸ ಗ್ರಾಮ ಪಂಚಾಯತ್‌ಗಳಿಗೆ ಮಾರ್ಚ್ 2017 ರ ಅಂತ್ಯದೊಳಗೆ ಆಪ್ಟಿಕಲ್ ಫೈಬರ್ ಕೇಬಲ್‌ಗಳ ಮೂಲಕ ಇಂಟರ್‌ನೆಟ್ ವ್ಯವಸ್ಥೆಯನ್ನು ಕಲ್ಪಿಸಲಾಗುವುದೆಂದು ಬಿ.ಎಸ್.ಎನ್.ಎಲ್. ಅಧಿಕಾರಿಗಳು ತಿಳಿಸಿದ್ದಾರೆಂದು ಸಭೆಯ ಗಮನಕ್ಕೆ ತರಲಾಯಿತು.

"ಪಂಚಾಯತ್ – 100 ಬಾಪೂಜಿ ಸೇವಾ ಕೇಂದ್ರ" ಗಳ ಸಮರ್ಪಕ ಬಳಕೆಗೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳುವುದು ಅವಶ್ಯಕವಾಗಿದ್ದು, ಈ ಬಗ್ಗೆ ಇಲಾಖೆಯು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸಚಿವರು ಸೂಚಿಸಿದರು.

ಗ್ರಾಅಪ ಇಲಾಖೆಯ ಸೇವೆಗಳು, ನಾಡ ಕಛೇರಿಯ ಸೇವೆಗಳು ಹಾಗೂ ಆರ್.ಟಿ.ಸಿ ವಿತರಣೆಯ ಬಗ್ಗೆ ಜಿಲ್ಲಾವಾರು ಪ್ರಗತಿ ಪರಿಶೀಲನೆ ನಡೆಸಿದರು. ಜುಲೈ–2016 ರಿಂದ ಪ್ರತೀ ವಾರದ ಪ್ರಗತಿ ಹಾಗೂ ಮಾಹೆಯಾನ ಪ್ರಗತಿಯ ಗ್ರಾಫ್‌ನ್ನು ಪರಿಶೀಲಿಸಿದರು.

**1**

| **ದಿನಾಂಕ: 31–08–2016 ರ ಪ್ರಕಾರ ಆನ್‌ಲೈನ್ ಸೇವೆಗಳಿಗೆ ಸಂಬಂಧಿಸಿದ ಅಂಕಿಅಂಶಗಳು** | |
|---|---|
| ವಿತರಿಸಿದ ಒಟ್ಟು ಆರ್.ಟಿ.ಸಿಗಳ ಸಂಖ್ಯೆ | 321793 |
| ನಾಡಕಛೇರಿ ಸೇವೆಗಳಿಗೆ ಸ್ವೀಕೃತವಾದ ಒಟ್ಟು ಅರ್ಜಿಗಳ ಸಂಖ್ಯೆ | 46417 |
| ಗ್ರಾಅಪ ಇಲಾಖೆಯ ಸೇವೆಗಳು | 1096 |

ಸದರಿ ವರದಿಯಲ್ಲಿನ ಪ್ರಗತಿಗೆ ಅನುಗುಣವಾಗಿ ಕಡಿಮೆ ಪ್ರಗತಿ ಸಾಧಿಸಿರುವ ಜಿಲ್ಲೆಗಳಲ್ಲಿ ಬಾಪೂಜಿ ಸೇವಾ ಕೇಂದ್ರದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಇರುವ ಸಮಸ್ಯೆಗಳನ್ನು ಪರಿಶೀಲಿಸಿ ಅಗತ್ಯ ಕ್ರಮವಹಿಸುವಂತೆ ಸೂಚಿಸಿದರು.

ಪ್ರಸ್ತುತ ನಾಡಕಛೇರಿ ಸೇವೆಗಳು ಮತ್ತು ಆರ್.ಟಿ.ಸಿ ವಿತರಣೆಗೆ ಸಂಬಂಧಿಸಿದಂತೆ ಪ್ರಗತಿ ವರದಿಗಳನ್ನು ಕಂದಾಯ ಇಲಾಖೆಯಿಂದ ಪಡೆಯಬೇಕಿರುತ್ತದೆ. ಆದರೆ, ವರದಿಗಳನ್ನು ಪಂಚತಂತ್ರದ Statistics Page ಅಲ್ಲಿ ಪಡೆಯಲು ಅನುವಾಗುವಂತೆ ತಂತ್ರಾಂಶದಲ್ಲಿ ಅಗತ್ಯ ಮಾರ್ಪಾಡುಗಳನ್ನು ಮಾಡುವಂತೆ ಸೂಚಿಸಿದರು.

ಪಂಚಾಯತ್ – 100 ಬಾಪೂಜಿ ಸೇವಾ ಕೇಂದ್ರ ಯೋಜನೆಯ ಯಶಸ್ವೀ ಅನುಷ್ಠಾನದ ದ್ಯೋತಕವಾಗಿ **"100 ಸೇವೆಗಳ 100 ದಿನಗಳು"** ನ್ನು ಆಚರಿಸುವ ಇಂಗಿತವನ್ನು ಸಚಿವರು ಸಭೆಯಲ್ಲಿ ವ್ಯಕ್ತಪಡಿಸಿದರು.

2. **ಅಟಲ್ ಜೀ ಜನಸ್ನೇಹಿ ಕೇಂದ್ರ ಯೋಜನೆಗಳನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಿರ್ವಹಿಸುವ ಬಗ್ಗೆ ಕಂದಾಯ ಇಲಾಖೆಯಿಂದ ಕಂಪ್ಯೂಟರ್ ಅಪರೇಟರ್‌ಗಳನ್ನು ನಿಯೋಜಿಸುವ ಬಗ್ಗೆ ಹಾಗೂ ಇತರೆ ಸೌಲಭ್ಯಗಳ ಕುರಿತು.**

"ಪಂಚಾಯತ್ – 100 ಬಾಪೂಜಿ ಸೇವಾ ಕೇಂದ್ರ" ಇಲ್ಲಿ ಕಂದಾಯ ಇಲಾಖೆಯ ಅಟಲ್ ಜೀ ಜನಸ್ನೇಹಿ ಕೇಂದ್ರ ಯೋಜನೆಗಳಲ್ಲಿ ಒಂದಾದ ಆರ್.ಟಿ.ಸಿ. ಯನ್ನು ಒದಗಿಸುವ ಕಾರ್ಯವನ್ನು ಮಾಡುತ್ತಿರುವುದರಿಂದ ನಾಡಕಛೇರಿಗಳಲ್ಲಿ ಕಾರ್ಯಒತ್ತಡ ಕಡಿಮೆಯಾಗುವುದರಿಂದ ಕಂದಾಯ ಇಲಾಖೆಯಿಂದ ಕಂಪ್ಯೂಟರ್ ಅಪರೇಟರ್‌ಗಳನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಿಯೋಜಿಸುವ ಬಗ್ಗೆ ಚರ್ಚಿಸಲಾಗಿ ಈ ವಿಷಯವಾಗಿ ಸಭೆಯಲ್ಲಿ ಹಾಜರಾಗಿದ್ದ ಕಂದಾಯ ಇಲಾಖೆಯ ಅಧಿಕಾರಿಗಳು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರೊಂದಿಗೆ ವ್ಯವಹರಿಸಬೇಕೆಂದು ತಿಳಿಸಿದರು.

3. **ಸಿಆಸು ಇಲಾಖೆ (ಇ–ಆಡಳಿತ) ರವರು Delivery of G2C Services from CSCs, Proposed service charge and sharing of service charge between stakeholders ಗೆ ಸಂಬಂಧಿಸಿದಂತೆ ಗ್ರಾಅಪ ಇಲಾಖೆಯ ಸಹಮತಿಯನ್ನು ಕೋರಿರುವ ಬಗ್ಗೆ.**

ಈ ವಿಷಯವಾಗಿ ಚರ್ಚಿಸಲಾಗಿ, ಸಿಆಸು ಇಲಾಖೆ (ಇ–ಆಡಳಿತ) ರವರು Delivery of G2C Services from CSCs ಗೆ "ಪಂಚಾಯತ್ – 100 ಬಾಪೂಜಿ ಸೇವಾ ಕೇಂದ್ರ" ದ ಮಾಹಿತಿಯನ್ನು ಒದಗಿಸಬೇಕೆಂದು ಕೋರಿ ಕಡತವನ್ನು ಸಲ್ಲಿಸಿರುತ್ತಾರೆ. ಇದಕ್ಕೆ ಮಾಹಿತಿಯನ್ನು ನೀಡಿಯೆಂದು ಸಭೆಯಲ್ಲಿ ಅಧ್ಯಕ್ಷರು ಸಹಮತಿಯನ್ನು ಸೂಚಿಸಿದರು. ಹಾಗೂ Proposed service charge and sharing of service charge between stakeholders ಗೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ತೀರ್ಮಾನವನ್ನು ಕೈಗೊಳ್ಳಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಸಿಆಸುಇ ಇ–ಆಡಳಿತ ಇಲಾಖೆಯವರು 3000 CSC/e-district ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದ್ದು, ಈ ಕೇಂದ್ರಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪಿಸಬಾರದು ಎಂದು ಅಧ್ಯಕ್ಷರು ಆದೇಶಿಸಿದರು.

4. **ರಾಜ್ಯದ ಅತ್ಯಂತ ಹಿಂದುಳಿದ ವರ್ಗ / ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದವರು ವಾಸ ಮಾಡುತ್ತಿರುವ ಗ್ರಾಮೀಣ ಪ್ರದೇಶಗಳಲ್ಲಿ 1000 ಗಣಕ ಯಂತ್ರ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ.**

ಈ ವಿಷಯವಾಗಿ 2014–15ನೇ ಸಾಲಿನಲ್ಲಿ ಸಚಿವ ಸಂಪುಟದ ತೀರ್ಮಾನದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಸ್ಥಾಪಿಸುವ ಸಾಮಾನ್ಯ ಸೇವಾ ಕೇಂದ್ರಗಳನ್ನು ಬಳಸಿಕೊಂಡು 1000 ಗಣಕ ಯಂತ್ರ ಕೇಂದ್ರಗಳನ್ನು ಸ್ಥಾಪಿಸಲು ಕ್ರಮಕೈಗೊಳ್ಳಬೇಕಾಗಿದ್ದು, ಈ ಬಗ್ಗೆ 5 ಬಾರಿ

ಸಿಆಸು ಇಲಾಖೆ (ಇ–ಆಡಳಿತ) ವತಿಯಿಂದ ಟೆಂಡರ್ ಕರೆದಿದ್ದರೂ ಗಣಕ ಕೇಂದ್ರ ಸ್ಥಾಪಿಸಲು ವಿಫಲವಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಸಭೆಯಲ್ಲಿ ಹಾಜರಾಗಿದ್ದ ಸಿಆಸು ಇಲಾಖೆ (ಇ–ಆಡಳಿತ) ಇಲಾಖೆಯ ಅಧಿಕಾರಿಗಳು ಪ್ರಸ್ತುತ ಜಾರಿಯಲ್ಲಿರುವ CSC ಮುಖಾಂತರವೇ ಗಣಕ ಯಂತ್ರ ಕೇಂದ್ರಗಳನ್ನು ಸ್ಥಾಪಿಸಬಹುದೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರು. ಆದರೆ, ಅಧ್ಯಕ್ಷರು ಈ ವಿಷಯವು ಅತ್ಯಂತ ಸೂಕ್ಷ್ಮವಾಗಿದ್ದು, ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ಎರಡು ಇಲಾಖೆಗಳ ಪ್ರಧಾನ ಕಾರ್ಯದರ್ಶಿಯವರ ಸಭೆಯನ್ನು ಕೂಡಲೇ ಕರೆದು ಇದರ ಬಗ್ಗೆ ತೀರ್ಮಾನವನ್ನು ಕೈಗೊಳ್ಳಬೇಕೆಂದು ಮಾನ್ಯ ಸಚಿವರು ಸೂಚಿಸಿದರು. ಮುಂದುವರೆದು ಈ ವಿಷಯವಾಗಿ ಸಿಆಸು ಇಲಾಖೆ (ಇ–ಆಡಳಿತ) ಇವರು ಕ್ರಮಕೈಗೊಳ್ಳದೇ ಇದ್ದಲ್ಲಿ ಕಿಯೋನಿಕ್ಸ್ ವತಿಯಿಂದ ಈ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ ಇವರು ಸಭೆಯ ಗಮನಕ್ಕೆ ತಂದರು. ತದನಂತರ ಮಾನ್ಯ ಅಧ್ಯಕ್ಷರು ಈ ವಿಚಾರವಾಗಿ ತೀರ್ಮಾನವನ್ನು ಕೈಗೊಂಡು ಪ್ರಥಮ ಹಂತದಲ್ಲಿ ಅಕ್ಟೋಬರ್ 02, 2016 ರಂದು 100 ಗಣಕ ಯಂತ್ರ ಕೇಂದ್ರಗಳನ್ನು ರಾಜ್ಯದ ಅತ್ಯಂತ ಹಿಂದುಳಿದ ವರ್ಗ / ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದವರು ವಾಸ ಮಾಡುತ್ತಿರುವ ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪಿಸುವ ಬಗ್ಗೆ ಪರಿಶೀಲಿಸಬೇಕೆಂದು ಸೂಚಿಸಿದರು.

5. **ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವಾಲಯ, ಗ್ರಾಅಪ ಇಲಾಖೆಯ ಅಧೀನ ಇಲಾಖೆಗಳು, ಜಿಲ್ಲಾ ಪಂಚಾಯತ್ ಕಛೇರಿಗಳು, ತಾಲ್ಲೂಕು ಪಂಚಾಯತ್ ಕಛೇರಿಗಳಲ್ಲಿ e-office ತಂತ್ರಾಂಶ ಅನುಷ್ಠಾನದ ಬಗ್ಗೆ.**

ಈ ವಿಷಯವಾಗಿ ನಿರ್ದೇಶಕರು, ಇ–ಆಡಳಿತ ಇವರು ಮೇಲ್ಕಂಡ ಈ ಯೋಜನೆಯು 2016–17ನೇ ಸಾಲಿನ ಹೊಸ ಯೋಜನೆಯಾಗಿದ್ದು, ಇದಕ್ಕಾಗಿ ₹ 10.00 ಕೋಟಿ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಲಾಗಿರುತ್ತದೆ. ಈ ಯೋಜನೆಯು ಹೊಸ ಯೋಜನೆಯಾಗಿರುವುದರಿಂದ ಆರ್ಥಿಕ ಮತ್ತು ಯೋಜನೆ ಇಲಾಖೆಯ ಅನುಮತಿಗಾಗಿ ಕಡತವನ್ನು ಸಲ್ಲಿಸಿದ್ದು, 2 ಇಲಾಖೆಗಳಿಂದ Technical Advisory Committee (TAC) ಯ ಅಭಿಪ್ರಾಯ ಪಡೆಯಲು ಸೂಚಿಸಿದ್ದು, ಇದಕ್ಕಾಗಿ ಸಿಆಸು ಇಲಾಖೆಗೆ ಕಡತವನ್ನು ಸಲ್ಲಿಸಲಾಗಿದೆಯೆಂದು ಸಭೆಯ ಗಮನಕ್ಕೆ ತಂದರು. ಇದಕ್ಕೆ ಸಭೆಯಲ್ಲಿ ಹಾಜರಾಗಿದ್ದ ಸಿಆಸು ಇಲಾಖೆ (ಇ–ಆಡಳಿತ) ವಿಭಾಗದ ಅಧಿಕಾರಿಗಳು ಸಧ್ಯದಲ್ಲಿಯೇ TAC ಸಭೆಯನ್ನು ಕರೆದು e-office ತಂತ್ರಾಂಶ ಅನುಷ್ಠಾನಕ್ಕೆ ಅಗತ್ಯವಿರುವ ಕಂಪ್ಯೂಟರ್ ಪರಿಕರಗಳು, ಪ್ರಿಂಟರ್/ಸ್ಕ್ಯಾನರ್‌ಗಳ Technical Specifications ಗಳನ್ನು ನೀಡಲಾಗುವುದೆಂದು ತಿಳಿಸಿದರು.

6. **"Web Application Security Auditing" of Panchatantra & Gandhi Sakshi Kayaka Systems by third party ಇದರ ಬಗ್ಗೆ ಚರ್ಚಿಸುವ ಕುರಿತು. (ಎನ್.ಐ.ಸಿ.ಯವರ ಪತ್ರ ದಿನಾಂಕ: 04–08–2016)**

ಈ ವಿಷಯವಾಗಿ ಚರ್ಚಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಲ್ಲಿ ಎನ್.ಐ.ಸಿ. ವತಿಯಿಂದ ನಿರ್ವಹಿಸಲಾಗುತ್ತಿರುವ ಪಂಚತಂತ್ರ ಮತ್ತು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ Web Application Security Auditing ನ್ನು third party ಯಿಂದ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

7. **ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ NOFN ಯೋಜನೆಯಡಿ ಆಪ್ಟಿಕಲ್ ಫೈಬರನ್ನು ಅಳವಡಿಸುವ ಬಗ್ಗೆ.**

ಈ ವಿಷಯವಾಗಿ ಚರ್ಚಿಸಿ ಒಟ್ಟು 6022 ಗ್ರಾಮ ಪಂಚಾಯತ್‌ಗಳ ಪೈಕಿ ಈಗ 3324 ಗ್ರಾಮ ಪಂಚಾಯತ್‌ಗಳಲ್ಲಿ ಮಾತ್ರ ಆಪ್ಟಿಕಲ್ ಫೈಬರ್ ಕೇಬಲ್‌ಗಳ ಮೂಲಕ ಇಂಟರ್‌ನೆಟ್ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಉಳಿದ ಗ್ರಾಮ ಪಂಚಾಯತ್‌ಗಳಲ್ಲಿ ಅನ್ಯ ಮಾರ್ಗಗಳನ್ನು ಅನುಸರಿಸಿ ಇಂಟರ್‌ನೆಟ್ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ. ಈ ವಿಷಯವಾಗಿ ಬಿ.ಎಸ್.ಎನ್.ಎಲ್ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದ್ದು, ಉಳಿದ ಹಳೆಯ ಗ್ರಾಮ ಪಂಚಾಯತ್‌ಗಳಿಗೆ ಡಿಸೆಂಬರ್ 2016ರ ಅಂತ್ಯದಲ್ಲಿ ಹಾಗೂ ಹೊಸ ಗ್ರಾಮ ಪಂಚಾಯತ್‌ಗಳಿಗೆ ಮಾರ್ಚ್ 2017 ರ ಅಂತ್ಯದೊಳಗೆ ಆಪ್ಟಿಕಲ್ ಫೈಬರ್ ಕೇಬಲ್‌ಗಳ ಮೂಲಕ ಇಂಟರ್‌ನೆಟ್ ವ್ಯವಸ್ಥೆಯನ್ನು ಕಲ್ಪಿಸಲಾಗುವುದೆಂದು ಬಿ.ಎಸ್.ಎನ್.ಎಲ್ ಅಧಿಕಾರಿಗಳು ತಿಳಿಸಿದ್ದಾರೆಂದು ಸಭೆಯ ಗಮನಕ್ಕೆ ತರಲಾಯಿತು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಎಚ್.ಕೆ. ಪಾಟೀಲ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

**ಸಂ:**ಗ್ರಾಅಪ/01/ಗ.ಕೋಶ/2016
**ದಿನಾಂಕ:**14.09.2016

**ಇವರಿಗೆ:**

1. ನಿರ್ದೇಶಕರು (ಪಂ.ರಾಜ್-1), ಗ್ರಾಅಪ ಇಲಾಖೆ, ಬೆಂಗಳೂರು.
2. ನಿರ್ದೇಶಕರು (ಪಂ.ರಾಜ್-2), ಗ್ರಾಅಪ ಇಲಾಖೆ, ಬೆಂಗಳೂರು.
3. ಆಯುಕ್ತರು, ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳು, ಕೆ.ಆರ್.ವೃತ್ತ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ(ಇ-ಆಡಳಿತ), ಸಿಆಸು ಇಲಾಖೆ, ಬೆಂಗಳೂರು.
5. ಡಾ॥ ಹರೀಶ್ ಕುಮಾರ್ ಕೆ. Special Deputy Commissioner, Bhoomi Monitoring Cell.
6. ಮೀನಾ ನಾಗರಾಜ್, Additional Director, AJSK, Revenue Dept.
7. ಬಾಲಚಂದ್ರ, PSA, NIC, Bengaluru.
8. ದೀಪಕ್ ದೇವ್, Sr. Consultant, SeMT, CeG(e-Gov).
9. ಸುರೇಶ್ ನಾಯರ್, Project Manager, Bhoomi.
10. ಮಂಜುನಾಥ್, Project Leader, AJSK, Revenue Dept.
11. ಪವನಕುಮಾರ್, Project Manager, AJSK, Revenue Dept.
12. ರಾಜ್ಯ ಯೋಜನಾ ವ್ಯವಸ್ಥಾಪಕರು, ಇ-ಪಂಚಾಯತ್, ಗ್ರಾಅಪ ಇಲಾಖೆ.
13. ಪ್ರೋಗ್ರಾಮರ್, ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.

**ಪ್ರತಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ನಿರ್ದೇಶಕರು (ಇ-ಆಡಳಿತ) ಇವರ ಆಪ್ತ ಕಾರ್ಯದರ್ಶಿಗಳು/ ಸಹಾಯಕರುಗಳು, ಗ್ರಾಅಪ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.